


ಪದಕೋಶ ಈ ಹತ್ತು ಗಂಟೆಯ ಬಸ್ಸು. ಬಸ್ಸಿನ ಸೀಟು ನೂರು ವರ್ಷವಾದರೂ ಅದು ಮುರಿಯದಂತಹ ಜೋಡಣೆ. ತಲೆಗೆ ದಪ್ಪದಾದ ಕಂಬಿಗಳು. ಸೀಟೇನೋ ಒಂದಿಷ್ಟು ಮೆತ್ತಗೆ ಅನಿಸಿ, ತಲೆ ಆನಿಸಿಕೊಳ್ಳಲು ಕಂಬಿಗೆ ತಲೆ ನೀಡಿದರೆ ಸಾಧ್ಯವೇ ಇರಲಿಲ್ಲ. ಆ ರಸ್ತೆಯ ಬಸ್ಸು ನೈಂಟಿ ಹೊಡೆದು ಓಡಾಡಿದಂತೆ ಹಡಗಲಿಗೆ ತಂದು ಬಿಡುವುದೇ ನಮ್ಮ ಪುಣ್ಯ. ಎಷ್ಟೋ ಸಲ ಕಂಬಿಗೆ ತಲೆ, ಕುತ್ತಿಗೆ ಬಡಿದು ಗಾಯ ಮಾಡಿಕೊಂಡದ್ದೂ ಇದೆ. ಸದಾ ಎಚ್ಚರವಾಗಿದ್ದೇ ಪಯಣಿಸುವ ಕಾಲವದು. ಒಂದು ವೇಳೆ ಮಲಗಿದರೆ ಸೀಟಿನ ತುಂಬಾ ಮಲಗಬೇಕು ಅಲ್ಲಿ ತಿಗಣೆಯ ಕಾಟ. ಅವು ಶರೀಪಜ್ಜನಿಗೇ ಬಿಟ್ಟಿಲ್ಲ ಇನ್ನು ನಮ್ಮನ್ನು ಕೇಳುತ್ತವೆಯೋ. ನಾವು ಬಿಸಿರಕ್ತದ ಹುಡುಗರು ಬೇರೆ. ಹೀರಿ ಬದುಕುವುದೇ ಅವುಗಳ ಕೆಲಸ. ಅವನ್ನು ಹಿಡಿದು ಹೊಸಕೋಣವೆಂದರೆ ದಪ್ಪ ಲೆದರ್ ಕುಷನ್ ಸೀಟೊಳಗೆ ಜೇನುಗೂಡಂತೆ ಮನೆಮಾಡಿದ್ದವು. ಆ ಬಂಕರ್ ಅನ್ನು ನಾವು ನಾಶಮಾಡುವಂತಿರಲಿಲ್ಲ.

ದೇವರು ದೊಡ್ಡವನು. ಒಮ್ಮೊಮ್ಮೆ ಐವತ್ತು ಅಲ್ಲ ನೂರು ಜನ ತುಂಬಿಕೊಂಡು ಬಸ್ಸಿನ ಬಾಗಿಲು, ಹಿಂದಿನ ಏಣಿ ಮೇಲೆ, ಬಸ್ಸಿನ ಟಾಪಿನ ಮೇಲೆ ಹತ್ತಾರು ಜನ ಸಾಮಾನ್ಯವಾಗಿ ಇರುತ್ತಿದ್ದರು. ಸಂತೆ, ಮೈಲಾರ ಜಾತ್ರೆ, ಕೊಟ್ಟೂರು ಜಾತ್ರೆ, ಹಡಗಲಿ ಉರುಸು, ಹಾಲಸ್ವಾಮಿ, ಮೊದಲಗಟ್ಟೆ ಜಾತ್ರೆಗಳು ಬಂದವೆಂದರೆ ಈ ಹತ್ತು ಗಂಟೆಯ ಬಸ್ಸು ಕಾಪಾಡಲು ದೇವರೇ ಬರಬೇಕು!

ನನಗೆ ನೆನಪಿರುವಂತೆ ಕೋಳಿ ನಾಯಿ ಕುರಿ ಗಾಲಿಯಲ್ಲಿ ಹೋಗಿ ಜೀವ ಕಳೆದುಕೊಂಡಿರುವುದನ್ನು ಬಿಟ್ಟರೆ, ಮನುಷ್ಯರಾರೂ ತಮ್ಮ ಪ್ರಾಣವ ಇಲ್ಲಿ ಕಳೆದುಕೊಂಡಿಲ್ಲ. ಅಷ್ಟು ನೀತಿ ನಿಯತ್ತು ಈ ಹತ್ತು ಗಂಟೆ ಬಸ್ಸಿನದು. ನಮ್ಮ ಆಗಿನ ಡ್ರೈವರಣ್ಣ, ಕಂಡಕ್ಟರ್ ಅಣ್ಣನವರು ಯಾವ ಪ್ರಶಸ್ತಿ, ಗೌರವ ಶಾಲು ತುರಾಯಿ ಇಲ್ಲದೆಯೂ ಪ್ರಾಮಾಣಿಕತೆಯಿಂದ ನಿತ್ಯ ಈ ಕಾಯಕ ಮಾಡಿ ಬದುಕಿದವರು.

ಈಗ ಅವರೆಲ್ಲಿದ್ದಾರೋ ನಾ ಕಾಣೆ! ಧಾರವಾಡಕ್ಕೆ ಬಂದು ಆಜುಬಾಜು ಹತ್ತು ವರ್ಷಗಳಾದವು. ಹಿಂದಿನ ಏಳು ವರುಷಗಳ ಹಾವೇರಿಯಲ್ಲಿ ಕಳೆದೆ. ಆದರೂ ನಮ್ಮ ಬಾಲ್ಯವ ಸುಂದರಗೊಳಿಸಿದ್ದ ಆ ಹತ್ತು ಗಂಟೆ ಬಸ್ಸು ನನ್ನ ಕಣ್ಣಮುಂದೆ ಮನದ ಮುಂದೆ ಇನ್ನೂ ಹಾದು ಹೋಗುತ್ತಲೇ ಇದೆ. ಆದರೆ, ವಾಸ್ತವವಾಗಿ ಈಗ ಹತ್ತು ಗಂಟೆ ಬಸ್ಸು ನಮ್ಮೂರಿಗೆ ಬರುತ್ತಿಲ್ಲವೆಂದು ತಿಳಿದಮೇಲೆ ಮನಸ್ಸಿಗೆ ಬೇಸರವಾಯಿತು. ನಮ್ಮೂರಿನ ದೋಸ್ತ ಮೈಲಾರಪ್ಪ ಮಲ್ಲನಕೇರಿಯವರೂ ಆ ಬಸ್ಸಿನ ಕಾಲ ಮುಗಿಯಿತು ನಿಂಗಪ್ಪರೇ ಎಂದ. ಯಾಕೆ